ಅ) ಬಂದಿದೆ.

ಆ) ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯರ ಹುದ್ದೆ ಮಂಜೂರು ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಡಾ॥ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಕುದೂರು ಮೊದಲು ಒಂದು ಕ್ಷೇತ್ರವಾಗಿತ್ತು ಈಗ ಅದು ನನ್ನಕ್ಷೇತ್ರಕ್ಕೆ ಸೇರಿಕೊಂಡಿದೆ. ಅಲ್ಲಿಯ ಆರೋಗ್ಯ ಕೇಂದ್ರದಲ್ಲಿ ಬಹಳ ಅವಶ್ಯವಾದಂಥ ಮಹಿಳಾ ವೈದ್ಯರ ಹುದ್ದೆ ಇಲ್ಲಿ. ಇದು ಬಹಳ ಅವಶ್ಯಕವಾಗಿರತಕ್ಕಂಥ ಜಾಗವಾಗಿರುವುದರಿಂದ ಅಲ್ಲಿ ಮಹಿಳಾ ವೈದ್ಯರು ಇದ್ದಾರೆಯೇ ಎಂದು ಕೇಳಿದ್ದಕ್ಕೆ ಉತ್ತರದಲ್ಲಿ ಈ ವಿಷಯ ಗಮನಕ್ಕೆ ಬಂದಿದೆ ಎಂದಿದ್ದಾರೆ. ಆದರೆ ಇನ್ನು ಕೂಡ ಆ ಹುದ್ದೆಯೇ ಮಂಜೂರಾಗಿಲ್ಲ, ಆ ಹುದ್ದೆಯನ್ನು ಮಂಜೂರು ಮಾಡಿದ ಮೇಲೆ ಅದನ್ನು ಭರ್ತಿ ಮಾಡುತ್ತೇವೆ ಎನ್ನತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಒಂದು ವರ್ಷದಿಂದಲೂ ಕೂಡ ಹುದ್ದೆಯನ್ನು ಮಂಜೂರು ಮಾಡುತ್ತೇವೆ ಎಂದು ಹೇಳಿಕೊಂಡು ಬಂದಿದ್ದಾರೆ. ಆದುದರಿಂದ ದಯಮಾಡಿ ಈ ಹುದ್ದೆಯನ್ನು ಯಾವಾಗ ಮಂಜೂರು ಮಾಡುತ್ತಾರೆ ಮತ್ತು ಯಾವಾಗ ಆ ಹುದ್ದೆಯನ್ನು ಭರ್ತಿ ಮಾಡುತ್ತಾರೆ ಎಂಬುದನ್ನು ಹೇಳಬೇಕು.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಈಗ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಂಜೂರು ಆಗಿರುವ ಹುದ್ದೆ ಕೇವಲ ಒಬ್ಬ ವೈಧ್ಯಾದಿಕಾರಿ, ಕೇವಲ 16 ಹಾಸಿಗೆಗಳಿರತಕ್ಕಂಥ ಆರೋಗ್ಯ ಕೇಂದ್ರ. ಮಹಿಳಾ ವೈದ್ಯರನ್ನು ನೇಮಕ ಮಾಡುತ್ತೇವೆ ಎಂದು ಉತ್ತರದಲ್ಲಿ ಕೊಟ್ಟಿದ್ದೇವೆ. ಅತಿ ದೀರ್ಘವಾಗಿ ನೇಮಕ ಮಾಡಲು ಇರತಕ್ಕಂಥ ಕ್ರಮವನ್ನು ಕೈಗೊಳ್ಳುತ್ತೇನೆ.

ಬಾದಾಮಿ ತಾಲ್ಲೂಕು ಹಲ್ಲುಕುರ್ಕಿ ಹಾಗೂ ಹಾಲಗೇರಿ ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು.

87 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗುತ್ತದೆ?

ಆ) ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು?

ಇ) ಅವುಗಳಲ್ಲಿ ಬಾದಾಮಿ ತಾಲ್ಲೂಕಿನ ಹಲ್ಲುಕುರ್ಕಿ ಹಾಗೂ ಹಾಲಗೇರಿ ಗ್ರಾಮಗಳಿಗೆ ನಿರ್ದಿಷ್ಟವಾಗಿ 1996-97ರಲ್ಲಿ ಮಂಜೂರಾತಿ ನೀಡಲಾಗುವುದೆ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು.

ಆ) 50.

ಇ) ಅಂತಿಮ ತೀರ್ಮಾನ ಕೈಗೊಂಡಿರುವುದಿಲ್ಲ. ಹಾಗೂ 1996-97ನೇ ಸಾಲಿಗೆ ಸರ್ಕಾರವು ಗುರಿ ನಿಗಧಿ ಪಡಿಸಿರುವುದಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಬಾದಾಮಿ ತಾಲ್ಲೂಕಿಗೆ ಸುಮಾರು 7-8 ವರ್ಷಗಳಿಂದ ಒಂದನ್ನೂ ಮಂಜೂರು ಮಾಡಿಲ್ಲ. ಈಗ ನಾನು ಕೇಳತಕ್ಕಂಥ ಪ್ರಶ್ನೆಯೆಂದರೆ ಕಲ್ಬುರ್ಗಿ ಮತ್ತು ಹಾಲಗೇರಿ ಗ್ರಾಮಗಳಿಗೆ ಈ ವರ್ಷ ಕೊಡುವುದಕ್ಕೆ ನಿರ್ದಿಷ್ಟವಾಗಿ ತಾವು ದಯವಿಟ್ಟು ಹೇಳುತ್ತಿರೋ?

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ನಿರ್ದಿಷ್ಟವಾಗಿ ನಾನು ಈಗಲೇ ಕೊಡುತ್ತೇನೆ ಎಂದು ಹೇಳುವುದರ ಬದಲು ಈ ವಿಚಾರ ಏನು ತಾವು ಹೇಳಿದ್ದೀರಿ ಅದು ನಿಜವಾಗಿಯೂ ಕೂಡ ಪರಿಶೀಲನೆಗೆ ಅರ್ಹವಾಗಿರತಕ್ಕಂಥದ್ದು, ಅದರ ಬಗ್ಗೆ ಚಿಂತನೆಯನ್ನು ಮಾಡಲೇಬೇಕಾಗುತ್ತದೆ ಮತ್ತು ಈ ವರ್ಷ ಕೊಡುತ್ತೀರತಕ್ಕಂಥದ್ದರಲ್ಲಿ ಬಹುಶಃ ಒಂದನ್ನಾದರೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಸವಲತ್ತುಗಳು

88 - ಶ್ರೀ ಐ.ಎಂ. ಜಯರಾಮ ಶೆಟ್ಟಿ (ಬೈಂದೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ಶಾಲೆಗಳ ಮಕ್ಕಳಿಗೆ ಉಚಿತ ಬಟ್ಟೆ, ಉಚಿತ ಪುಸ್ತಕ ಮತ್ತು ಇತರ ಸಮವಸ್ತುಗಳಿಗೆ ಯಾವ ಪ್ರಮಾಣದಲ್ಲಿ ಹಣ ಖರ್ಚು ಮಾಡುತ್ತಿದೆ (ವಿವರ ಒದಗಿಸುವುದು)

ಆ) ಈ ಎಲ್ಲಾ ಸವಲತ್ತುಗಳನ್ನು ಖಾಸಗಿ ಅನುದಾನಿತ ಶಾಲೆಗಳಿಗೆ ವಿಸ್ತರಿಸಲಾಗಿದೆಯೇ?

- *ವಿಸ್ತರಿಸುವುದಾದಲ್ಲಿ ಎಂದಿನಿಂದ ವಿಸ್ತರಿಸುವುದು.*
- *ರೂಪುರೇಷೆಗಳನ್ನು ನೀಡುವುದು*

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಕಳೆದ 3 ವರ್ಷಗಳಲ್ಲಿ ಈ ಕಾರ್ಯಕ್ರಮಗಳಿಗೆ ಖರ್ಚು ಮಾಡಿರುವ ಹಣದ ಪ್ರಮಾಣ ಈ ರೀತಿ ಇದೆ.

ಕಾರ್ಯಕ್ರಮ	1993-94	1994-95	1995-96
			(ಲಕ್ಷ ರೂ.ಗಳಲ್ಲಿ)
ಉಚಿತ ಸಮವಸ್ತ್ರ ವಿತರಣೆಗಾಗಿ	1183.74	1250.00	1045.00
ಉಚಿತ ಪಠ್ಯ ಪುಸ್ತಕ ವಿತರಣೆಗಾಗಿ	182.84	625.00	642.00